# ಬಾಸವೂರು ಕಂಪಣದ ಶೈವ ಪುರುಷ ಶಿಲ್ಪಗಳು

**ಶಿವಯೋಗಿ ಕೋರಿಶೆಟ್ಟರ**

ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜಿ.ಹೆಚ್. ಪದವಿ ಮಹಾವಿದ್ಯಾಲಯ, ಹಾವೇರಿ.

DOI: https://doi.org/10.5281/zenodo.17773618

## ABSTRACT:

ಪ್ರಸ್ತುತ ಲೇಖನವು ಪ್ರಾಚೀನ ಬಾಸವೂರು ಕಂಪಣದ (ಇಂದಿನ ಹಾವೇರಿ, ಹಾನಗಲ್, ಬ್ಯಾಡಗಿ ತಾಲ್ಲೂಕುಗಳ ಪ್ರದೇಶ) ಶೈವ ಪುರುಷ ಶಿಲ್ಪಗಳ ಸಮೀಕ್ಷೆ ನಡೆಸುತ್ತದೆ. ಕ್ರಿ.ಶ. 8 ರಿಂದ 13ನೇ ಶತಮಾನದ ಅಂತ್ಯದವರೆಗೆ ಅಸ್ತಿತ್ವದಲ್ಲಿದ್ದ ಈ ಆಡಳಿತ ಕೇಂದ್ರವು ಧಾರ್ಮಿಕ ಸಾಮರಸ್ಯಕ್ಕೆ ಹೆಸರುವಾಸಿಯಾಗಿತ್ತು. ಕ್ಷೇತ್ರಕಾರ್ಯದಲ್ಲಿ ದೊರೆತ ಶಿಲ್ಪಗಳನ್ನು ಪರಿಚಯಿಸುವುದು ಲೇಖನದ ಮುಖ್ಯ ಉದ್ದೇಶವಾಗಿದೆ. ಇಲ್ಲಿ ಶೈವಧರ್ಮವು ಪ್ರಬಲವಾಗಿತ್ತು ಎಂಬುದನ್ನು ಶಿವಲಿಂಗ, ಗಣಪತಿ, ಭೈರವ, ವೀರಭದ್ರ, ಕಾರ್ತಿಕೇಯ, ಹರಿಹರ, ಉಮಾಮಹೇಶ್ವರ, ರತಿ–ಮನ್ಮಥ ಹಾಗೂ ನಂದಿ ಶಿಲ್ಪಗಳ ಸಮೃದ್ಧಿ ಮತ್ತು ಮನೋಜ್ಞ ಕೆತ್ತನೆಗಳು ಸ್ಪಷ್ಟಪಡಿಸುತ್ತವೆ. ಈ ಶಿಲ್ಪಗಳು ಕಂಪಣದ ಪ್ರಬಲ ಶೈವ ಪರಂಪರೆ ಮತ್ತು ಕಲಾತ್ಮಕ ಅಭಿವ್ಯಕ್ತಿಯನ್ನು ಬಿಂಬಿಸುತ್ತವೆ. ವಿಶೇಷವಾಗಿ, ಕುಳೇನೂರಿನ ಏಕೈಕ ರತಿ–ಮನ್ಮಥ ಶಿಲ್ಪವು ವಿಶಿಷ್ಟವಾಗಿದೆ.

## KEYWORDS:

ಬಾಸವೂರು ಕಂಪಣ, ಶೈವ ಶಿಲ್ಪಗಳು, ಉಮಾಮಹೇಶ್ವರ, ಹಾವೇರಿ ಜಿಲ್ಲೆ, ನಂದಿ.

ಪ್ರಾಚೀನ ಕುಂತಳದೇಶದ ಬನವಾಸಿ–12000ದ ಆಧೀನಕ್ಕೆ ಒಳಪಟ್ಟಿದ್ದ ಹಲವಾರು ಆಡಳಿತ ಕಂಪಣಗಳಲ್ಲಿ ಬಾಸವೂರು–140 ಒಂದಾಗಿದೆ. ಈ ಕಂಪಣವು ಇಂದಿನ ಹಾನಗಲ್ ತಾಲೂಕಿನ ಕುಗ್ರಾಮ ಹಿರೇಬಾಸೂರನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಹೊಂದಿದ್ದು, ಸುತ್ತಲಿನ 140 ಗ್ರಾಮಗಳಿಗೆ ಪ್ರಮುಖ ಕೇಂದ್ರವಾಗಿತ್ತು. ಕ್ರಿ.ಶ. 8ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಬಾಸವೂರು ಕಂಪಣವು ಕ್ರಿ.ಶ. 13ನೇ ಶತಮಾನದ ಅಂತ್ಯದವರೆಗೂ ಪ್ರಬಲವಾಗಿರುವುದು ಶಾಸನಗಳ ಆಧಾರದಿಂದ ತಿಳಿದು ಬರುತ್ತದೆ. ಪ್ರಸ್ತುತ ಹಾವೇರಿ ಜಿಲ್ಲೆಯ ಹಾನಗಲ್, ಹಾವೇರಿ ಹಾಗೂ ಬ್ಯಾಡಗಿ ತಾಲೂಕುಗಳ ಪ್ರದೇಶಗಳನ್ನು ಈ ಆಡಳಿತ ಕಂಪಣವು ಒಳಗೊಂಡಿತ್ತು. ಕನ್ನಡ ನಾಡನ್ನು ಆಳಿದ ಸಾರ್ವಭೌಮರ ಆಧೀನರಾಗಿ ಸೇನವಾರ ಹಾಗೂ ಖಚರ ಮನೆತನದ ಅರಸರುಗಳಿಂದ ಈ ಕಂಪಣ ಆಳಲ್ಪಟ್ಟಿದೆ. ಉತ್ತಮ ಆಡಳಿತ ಹಾಗೂ ಧಾರ್ಮಿಕ ಸಾಮರಸ್ಯದ ಮೂಲಕ ಕಂಪಣದ ಅಭಿವೃದ್ಧಿಗೆ ಈ ಮಾಂಡಳೀಕರು ಶ್ರಮಿಸಿದ್ದಾರೆ. ಇಲ್ಲಿ ಶೈವ, ವೈಷ್ಣವ, ಶಾಕ್ತ ಹಾಗೂ ಜೈನ ಧರ್ಮಗಳು ಸಮನ್ವಯತೆಯನ್ನು ಹೊಂದಿ ಬಾಳಿದವು. ಈ ಮೇಲಿನ ಧರ್ಮಗಳಿಗೆ ಸಂಬಂಧಿಸಿ,

ಹಲವಾರು ಶಿಲ್ಪಗಳು ಈ ಭಾಗದ ಕ್ಷೇತ್ರಕಾರ್ಯದಲ್ಲಿ ಕಂಡುಬಂದಿವೆ. ಪ್ರಸ್ತುತ ಲೇಖನದ ಉದ್ದೇಶ ಬಾಸವೂರು ಕಂಪಣದಲ್ಲಿ ಕಂಡುಬಂದಿರುವ ಶೈವ ಪುರುಷ ಶಿಲ್ಪಗಳನ್ನು (ಉಮಾಮಹೇಶ್ವರ ಹಾಗೂ ರತಿ ಮನ್ಮಥ ಶಿಲ್ಪಗಳನ್ನು ಒಳಗೊಂಡಂತೆ) ಪರಿಚಯಿಸುವುದಾಗಿದೆ.

ಭಾರತದಲ್ಲಿ ಸಿಂಧೂ ನಾಗರೀಕತೆಯ ಕಾಲದಿಂದಲೂ ಶೈವ ಧರ್ಮದ ಅಸ್ತಿತ್ವವನ್ನು ಕಾಣಬಹುದು. ಈ ನಾಗರೀಕತೆಯ ನೆಲೆಯಲ್ಲಿ ಲಭ್ಯವಾದ ಕಲ್ಲು ಬಳೆಗಳು ಲಿಂಗಪೀಠಗಳೆಂದು ಗುರುತಿಸಲಾಗಿದೆ. ವೇದಗಳಲ್ಲಿಯೂ ರುದ್ರನ ಉಲ್ಲೇಖವಿದೆ. ಅವನನ್ನು ರುದ್ರ, ಶರ್ವ, ಉಗ್ರ, ಅಶನಿ ಎಂದು ಅವನ ಘೋರ ರೂಪವನ್ನು ನಿರ್ದೇಶಿಸಿ ಕರೆದಿರುವುದಲ್ಲದೆ; ಭವ, ಪಶುಪತಿ, ಮಹಾದೇವ, ಈಶಾನ ಎಂದು ರುದ್ರನ ಸೌಮ್ಯ ಸ್ವಭಾವವನ್ನು ಲಕ್ಷಿಸಿ ಕರೆಯಲಾಗಿದೆ. ಹೀಗೆ ರುದ್ರನಿಗೆ ಘೋರ ಮತ್ತು ಸೌಮ್ಯ ಎರಡು ರೂಪಗಳಿವೆ. ಶಿವನನ್ನು ವೇದಗಳಲ್ಲಿ ವೈದ್ಯದೇವನೆಂದೂ ಕರೆಯಲಾಗಿದೆ. ಅವನು ಔಷಧಗಳಿಗೆ ಅಧಿಪತಿ ಆದುದರಿಂದ ದೇವಲೋಕದ ವೈದ್ಯನಾಗಿದ್ದಾನೆ. ಅವನು ಬಯಲು ಹೊಲಗಳ ಯಜಮಾನ, ಪಶುಗಳ ಒಡೆಯ, ಆದುದರಿಂದ ಪಶುಪತಿಯೂ ಹೌದು ಸೃಷ್ಟಿ, ಸ್ಥಿತಿ, ಮತ್ತು ಲಯ ಕಾರ್ಯಗಳಲ್ಲಿ ಶಿವನು ಲಯಕರ್ತನಾಗಿ ಪುರಾಣ ಕಾಲದಲ್ಲಿ ಕಂಡುಬರುತ್ತಾನೆ.

ಬಾಸವೂರು ಕಂಪಣದಲ್ಲಿ ಕಂಡು ಬಂದಿರುವ ಶೈವಧರ್ಮದ ಶಿವನ ಪರಿವಾರ ಶಿಲ್ಪಗಳಲ್ಲಿ ಶಿವಲಿಂಗ, ಗಣಪತಿ, ಭೈರವ, ವೀರಭದ್ರ, ಕಾರ್ತಿಕೇಯ, ಹರಿಹರ, ಉಮಾಮಹೇಶ್ವರ, ರತಿಮನ್ಮಥ ಹಾಗೂ ನಂದಿಶಿಲ್ಪಗಳ ಕುರಿತು ಪರಿಚಯಿಸಲಾಗಿದೆ.

**ಶಿವಲಿಂಗಗಳು:**

ಶೈವಧರ್ಮದ ಶಿವನ ಪ್ರತೀಕ ಲಿಂಗಗಳು. ಪ್ರತಿಯೊಂದು ಶಿವದೇವಾಲಯಗಳಲ್ಲಿ ಶಿವನನ್ನು ಲಿಂಗರೂಪದಲ್ಲಿ ಪೂಜಿಸಲಾಗುತ್ತದೆ. ಸ್ಕಂದಪುರಾಣದಲ್ಲಿ ಆಕಾಶವು ಲಿಂಗಸ್ವರೂಪವೆಂದೂ, ಭೂಮಿಯು ಪಾಣಿಪೀಠವೆಂದೂ, ಈ ಬೃಹತ್ ಲಿಂಗದೊಳಗೆ ಜಗತ್ತು ಹುಟ್ಟಿಕೊಂಡು ಅಲ್ಲೇ ಲಯವಾಗುತ್ತದೆ ಎಂದು ಹೇಳಲಾಗಿದೆ. ಲಿಂಗದಿಂದಲೇ ಸಕಲ ಜಗತ್ತು ಹುಟ್ಟುತ್ತದೆ ಮತ್ತು ಅಲ್ಲಿಯೇ ಲಯವಾಗುತ್ತದೆ. 'ಲೀಯತೇ', 'ಗಮ್ಯತೆ', ಎಂಬ ಎರಡು ಧಾತುಗಳ ಪ್ರಥಮಾಕ್ಷರಗಳಿಂದ 'ಲಿಂಗ' ಶಬ್ದದ ಉತ್ಪನ್ನ ಎಂದು ಆಗಮಗಳು ಸಾರುತ್ತವೆ. ಸುಪ್ರಭೇದಾಗಮ ಪ್ರಕಾರ ಗರ್ಭಗೃಹದಲ್ಲಿ ಸ್ಥಾಪಿತಗೊಂಡ ಅಚಲ ಲಿಂಗಗಳಲ್ಲಿ ಒಂಬತ್ತು ವಿಧಗಳಿವೆ. ಅವು ಸ್ವಯಂಭೂ, ಪುರುಷ, ದೈವತ, ಗಾಣಪತ್ಯ, ಅಸುರ, ಸುರ, ರಾಕ್ಷಸ, ಮಾನುಷ, ಬಾಣಲಿಂಗಗಳಾಗಿವೆ. ಮಾನಸಾರ ಶಿಲ್ಪಶಾಸ್ತ್ರದ ಪ್ರಕಾರ ನಾಗಪೀಠ (ಚತುರ್ಭುಜವುಳ್ಳದ್ದು ) ದ್ರಾವಿಡಪೀಠ (ಅಷ್ಟಬುಜವುಳ್ಳದ್ದು ) ವೇಸರಪೀಠ

(ವೃತ್ತಾಕಾರಉಳ್ಳದ್ದು) ಮತ್ತು ಧಾರಾಪೀಠ (ವೈಶ್ವತ್ರಿಕ) ಎಂಬ ನಾಲ್ಕು ಪೀಠಪ್ರಕಾರಗಳಿವೆ.

ಬಾಸವೂರು ಕಂಪಣದಲ್ಲಿ ಬಹುಪಾಲು ಶೈವದೇವಾಲಯಗಳಿದ್ದು, ಇವುಗಳಲ್ಲಿ ಸಾಮಾನ್ಯವಾಗಿ ಚೌಕಾಕಾರ ಹಾಗೂ ವೃತ್ತಾಕಾರದ ಪೀಠಗಳನ್ನು ಹೊಂದಿರುವ ಲಿಂಗಗಳು ಕಂಡುಬರುತ್ತವೆ. ಉಪ್ಪುಣಶಿಯ ಕಲ್ಮೇಶ್ವರ ದೇವಾಲಯದಲ್ಲಿನ ಶಿವಲಿಂಗವು ನೀಲಿ ಛಾಯೆಯ ಕಪ್ಪು ಶಿಲೆಯಿಂದ ಮಾಡಲ್ಪಟ್ಟಿದ್ದು, ಮೂರು ಅಡಿಗಳಷ್ಟು ಎತ್ತರವಾಗಿದೆ. ಇದು ಚೌಕಾಕಾರದ ಪೀಠವನ್ನು ಹೊಂದಿದ್ದು. ಪೀಠ ರಚನೆಯಲ್ಲಿ ಜಗತಿ, ಪದ್ಮ, ಕಂಠ, ಶ್ರೀಪಟ್ಟ, ಕುಮುದ, ಕಂಠ, ನಿಮ್ನ, ಘೃತವಾರಿ ಭಾಗಗಳನ್ನು ಒಳಗೊಂಡಿದೆ. ವೃತ್ತಾಕಾರದ ಪೀಠರಚನೆಯನ್ನು ಹೊಂದಿರುವ ಲಿಂಗಗಳನ್ನು ಸಾಮಾನ್ಯವಾಗಿ ಎರಡು ಶಿಲಾ ಫಲಕ ಬಳಸಿ ನಿರ್ಮಿಸಲಾಗಿದೆ. ಇಂತಹ ಲಿಂಗವನ್ನು ಕಲಕೇರಿಯ ಬಸವೇಶ್ವರ ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಗಿದೆ. ಎರಡು ಅಡಿಗಳಷ್ಟು ಎತ್ತರವಾಗಿರುವ ಈ ಲಿಂಗವು ನೀಲಿ ಛಾಯೆಯ ಕಪ್ಪು ಶಿಲೆಯಲ್ಲಿ ರಚಿಸಲ್ಪಟ್ಟಿದೆ. ಇದರ ರುದ್ರಭಾಗವು ಅರ್ಧಅಡಿ ಎತ್ತರವಾಗಿದೆ.

**ಗಣಪತಿ:**

ಹಿಂದೂಗಳ ಮಂಗಳಕರ ಕಾರ್ಯಗಳಲ್ಲಿ ಮೊದಲ ಅಗ್ರಪೂಜೆಗೆ ಅರ್ಹನಾದವನೆಂದರೆ, ಗಣಗಳ ಒಡೆಯ ಗಣಪತಿ. ಬ್ರಹ್ಮಾಂಡ, ಗಣೇಶ, ವರಾಹ, ಸ್ಕಂದ, ಬ್ರಹ್ಮ-ವೈವರ್ತ, ಮತ್ಸ್ಯ, ವಾಮನ, ಪದ್ಮ, ಮೊದಲಾದ ಪುರಾಣಗಳು ಹಾಗೂ ರೂಪಮಂಡನ, ಕಾಮಿಕಾಗಮಗಳು ಗಣಪತಿಯನ್ನು ಉಲ್ಲೇಖಿಸಿವೆ. ನಾಲ್ಕು ಕೈಗಳನ್ನು ಹೊಂದಿರುವ ಗಣಪತಿ ಜನಪ್ರಿಯ. ಆದರೆ ಈತನು ನಾಲ್ಕು, ಆರು, ಹತ್ತು ಹಾಗೂ ಹದಿನಾರು ಕೈಗಳನ್ನು ಹೊಂದಿರುವವನು. ಸಾಮಾನ್ಯವಾಗಿ ಗಣಪತಿಯ ಶಿಲ್ಪಗಳು ಕುಳಿತ ಭಂಗಿಯಲ್ಲಿದ್ದು, ಆನೆಮುಖ, ಸುತ್ತಿದ ಸೊಂಡಿಲು (ವಕ್ರತುಂಡ) ದೊಡ್ಡ ಹೊಟ್ಟೆ (ಮಹೋದರ) ನಾಲ್ಕು ಕೈಗಳಿಂದ ಕೂಡಿದವನಾಗಿ ಪಾಶ, ಅಂಕುಶ, ಅಭಯ, ಮೋದಕಧಾರಿಯಾಗಿ ಕಂಡುಬರುತ್ತಾನೆ. ಶಿಲ್ಪಗಳಲ್ಲಿ ಗಣಪತಿಯನ್ನು ಸುಖಾಸೀನದಲ್ಲಿ ಕುಳಿತಂತೆ, ನಿಂತಂತೆ ಮತ್ತು ನೃತ್ಯಭಂಗಿಯಲ್ಲಿಯೂ ಕಂಡರಿಸಲಾಗಿದೆ.

ಅಧ್ಯಯನ ಕಂಪಣದಲ್ಲಿ ದೊರೆತ ಗಣಪತಿಯ ಶಿಲ್ಪಗಳು ಕುಳಿತ ಭಂಗಿಯಲ್ಲಿವೆ. ಉಪ್ಪುಣಶಿಯ ಕಲ್ಮೇಶ್ವರ ದೇವಾಲಯದಲ್ಲಿನ ಗಣಪತಿ ಶಿಲ್ಪವು ಮೂರು ಅಡಿಗಳಷ್ಟು ಎತ್ತರವಾಗಿದ್ದು, ಆಸೀನ ಭಂಗಿಯಲ್ಲಿದೆ. ನಾಲ್ಕು ಕೈಗಳನ್ನು ಹೊಂದಿದೆ. ಕೊಡಲಿ, ಅಂಕುಶ, ಮೋದಕವನ್ನು ಧರಿಸಿದ್ದು, ದಂತವನ್ನು ಹಿಡಿದ ಕೈ ಭಗ್ನಗೊಂಡಿದೆ. ಅಗಲವಾದ ಕಿವಿಗಳು, ಕಿರೀಟ ಆಕರ್ಷಕವಾಗಿದೆ. ಹಾವೇರಿಯ ಕಲ್ಮೇಶ್ವರ ದೇವಾಲಯದಲ್ಲಿನ ಗಣಪತಿ ಶಿಲ್ಪವು ಮೂರು ಅಡಿ ಇದ್ದು, ಆಸೀನ ಭಂಗಿಯಲ್ಲಿರುವ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದೆ. ಅಂಕುಶ ಹಾಗೂ ಗದೆಗಳನ್ನು

ಹಿಂಬದಿಯ ಕೈಗಳಲ್ಲಿ ಹಿಡಿದಿದ್ದರೆ, ಮುಂಭಾಗದ ಒಂದು ಕೈ ಅಭಯ ಹಸ್ತ ಹೊಂದಿದ್ದು, ಇನ್ನೊಂದು ಕೈ ಮುಕ್ಕಾಗಿದೆ. ಭುಜದ ಬಳಿಯಲ್ಲಿ ಸರ್ಪವನ್ನು ಕಾಣಬಹುದು. ಇದೇ ರೀತಿಯಾಗಿ ಕಾಗಿನೆಲೆ, ಹಿರೇಅಣಜಿ, ಹಿರೇಹಳ್ಳಿ, ಕಣ್ವೇಶ್ವರ ದೇವಿಹೊಸೂರುಗಳಲ್ಲಿನ ದೇವಾಲಯಗಳಲ್ಲಿ ಗಣಪತಿಯ ಶಿಲ್ಪಗಳನ್ನು ಕಾಣಬಹುದು.

**ಭೈರವ:**

ಶಿವನ ಸಂಹಾರಮೂರ್ತಿಗಳಲ್ಲಿ ಭೈರವನ ಸ್ವರೂಪವು ಪ್ರಧಾನವಾದುದು. ಭೈರವನ ಸ್ವರೂಪಗಳಲ್ಲಿ ಒಟ್ಟು 64 ಪ್ರಭೇದಗಳಿವೆ. ಈ ಅರವತ್ನಾಲ್ಕನ್ನೂ ಎಂಟು ವರ್ಗಗಳಾಗಿ ವಿಭಾಗಿಸಿದೆ. ಅವುಗಳಲ್ಲಿ ಅಸಿತಾಂಗ ಭೈರವ ಎಂಬುದು ಒಂದು ವರ್ಗ. ವಿಶಾಲಾಕ್ಷ, ಮಾರ್ತಾಂಡ, ಮೋದಕಪ್ರೀಯ, ಸ್ವಚ್ಚಂದ, ವಿಘ್ನಸಂತುಷ್ಟ, ಖೆಚರ ಮತ್ತು ಸಂಚಾರ ಎಂಬವು ಅಸಿತಾಂಗ ಭೈರವರಲ್ಲಿ ಬರುವ ಅಷ್ಟಮೂರ್ತಿಗಳು. ಈ ವರ್ಗದ ಭೈರವರು ಸುವರ್ಣ ವರ್ಣದವರಾಗಿದ್ದು, ಚತುರ್ಭುಜಗಳಿರುವುದು ಇವರ ವೈಶಿಷ್ಟ್ಯ . ತ್ರಿಶೂಲ, ಡಮರು, ಪಾಶ ಮತ್ತು ಖಡ್ಗಗಳು ಕ್ರಮವಾಗಿ ಇವರ ಕೈಯಲ್ಲಿರುವ ಆಯುಧಗಳು ಶಿಲ್ಪಾದರ್ಶದ ಪ್ರಕಾರ ಭಯಂಕರ ಮುಖವುಳ್ಳವನಾದ ಇವನು ನಾಲ್ಕು ಕೈಗಳನ್ನು ಹೊಂದಿದ್ದು, ಖಡ್ಗ, ತ್ರಿಶೂಲ, ಡಮರು ಹಾಗೂ ರುಂಡವನ್ನು ಹಿಡಿದಿರುತ್ತಾನೆ. ಕೋರೆಹಲ್ಲುಗಳನ್ನು ಹೊಂದಿದವನಾಗಿ ತಲೆ ಕೂದಲು ನೆಟ್ಟಗೆ ನಿಂತಿರುತ್ತವೆ. ಕೊರಳಲ್ಲಿ ರುಂಡಮಾಲೆಯನ್ನು ಧರಿಸಿದವನು. ಹಾವುಗಳಿಂದ ಅಲಂಕರಿಸಿಕೊಂಡಿರುವನು. ಮತ್ತು ನಾಯಿಯೊಂದಿಗೆ ಇವನನ್ನು ಗುರುತಿಸಲಾಗುತ್ತದೆ. ಆದುದರಿಂದ ಭೈರವನನ್ನು ಕ್ಷೇತ್ರಪಾಲನೆಂದು ಹೇಳಲಾಗುತ್ತದೆ.

ಬಾಸವೂರು ಕಂಪಣದ ಹಿರೇಅಣಜಿ, ಹಿರೇಬಾಸೂರು, ಕೆಲವರಕೊಪ್ಪ, ಮತ್ತೂರು ಸೇರಿದಂತೆ ಹಲವು ಭೈರವ ಶಿಲ್ಪಗಳು ಕಂಡುಬಂದಿವೆ. ಮತ್ತೂರಿನ ಕಲ್ಮೇಶ್ವರ ದೇವಾಲಯದ ನವರಂಗದಲ್ಲಿನ ಭೈರವ ಶಿಲ್ಪವು ನಾಲ್ಕುವರೆ ಅಡಿ ಎತ್ತರವಾಗಿದ್ದು, ದಿಗಂಬರವಾಗಿರುವ ಈ ಶಿಲ್ಪವು ಚತುರ್ಭುಜ ಹೊಂದಿದೆ. ಡಮರು, ತ್ರಿಶೂಲ, ಖಡ್ಗ, ರುಂಡ ಧರಿಸಿದೆ. ಅಗಲವಾದ ಕಣ್ಣು, ಕೋರೆಹಲ್ಲು, ಇಳಿಬಿದ್ದ ಜಡೆಗಳು, ಕೊರಳಹಾರ, ಸೊಂಟಪಟ್ಟಿ, ತೊಡೆ ಭಾಗದಲ್ಲಿ ನಾಗಬಂಧ, ಪಾದರಕ್ಷೆ, ಮೊಳಕಾಲಿನವರೆಗೂ ನೇತಾಡುವ ರುಂಡಮಾಲೆಯನ್ನು ಧರಿಸಿದೆ. ಹಿರೇಅಣಜಿಯಲ್ಲಿನ ಭೈರವ ಶಿಲ್ಪವು ಮೂರುಅಡಿ ಎತ್ತರವಾಗಿದ್ದು, ದಿಗಂಬರವಾಗಿರುವ ಈ ಶಿಲ್ಪವು ಚತುರ್ಭುಜ ಹೊಂದಿದೆ. ಡಮರು, ತ್ರಿಶೂಲ, ಖಡ್ಗ, ರುಂಡ ಧರಿಸಿದೆ. ಅಗಲವಾದ ಕಣ್ಣು, ಕೋರೆಹಲ್ಲು, ಇಳಿಬಿದ್ದ ಜಡೆಗಳು, ಕಂಠಹಾರ, ಸೊಂಟಪಟ್ಟಿ, ತೊಡೆ ಭಾಗದಲ್ಲಿ ನಾಗಬಂಧ, ಪಾದರಕ್ಷೆ, ಮೊಳಕಾಲಿನವರೆಗೂ ನೇತಾಡುವ ರುಂಡಮಾಲೆಯನ್ನು ಧರಿಸಿದೆ. ಎಡಭಾಗದ ಕೆಳಗೆ ನಾಯಿಯನ್ನು ಕಂಡರಿಸಲಾಗಿದೆ.

**ವೀರಭದ್ರ:**

ಪಂಚರಾತ್ರಾಗಮವು ವೀರಭದ್ರನ ಕುರಿತು ವಿವರಣೆ ನೀಡುತ್ತದೆ. ವೀರಭದ್ರನು ಕಪ್ಪು ಮೈಬಣ್ಣದವನು, ಮೂರು ಕಣ್ಣುಗಳುಳ್ಳವನು, ನಾಲ್ಕು ಕೈಗಳಲ್ಲಿ ಖಡ್ಗ, ಬಿಲ್ಲು, ಬಾಣ, ಗುರಾಣಿಗಳನ್ನು ಹಿಡಿದಿರುವನು. ರುಂಡ ಮಾಲೆಯನ್ನು, ಪಾದರಕ್ಷೆಯನ್ನು ಧರಿಸಿದವನು. ಅವನು ಸೊಂಟಪಟ್ಟಿಯಲ್ಲಿ ವಸ್ತ್ರವನ್ನು ಧರಿಸಿರುವನು. ದುಷ್ಟ ಸಂಹಾರಿಯೇನೇ ಕರೆಯಲ್ಪಡುವ ವೀರಭದ್ರನು ವೀರಶೈವರ ಆರಾಧ್ಯ ದೈವವೂ ಹೌದು. ಪ್ರಾಚೀನ ಕಾಲದಿಂದಲೂ ಪೂಜಿಸಲ್ಪಡುವ ಈ ದೇವನು ಬಾಸವೂರು ಕಂಪಣದಲ್ಲಿ ವೀರಶೈವರು ಬಹುಸಂಖ್ಯಾತರಾದ ಕಾರಣ ಅವರ ಆರಾಧ್ಯ ದೈವವೂ ಆಗಿದ್ದಾನೆ. ಕಂಪಣದಲ್ಲಿ ವೀರಭದ್ರನ ಶಿಲ್ಪಗಳನ್ನು ಶಿವಪುರ, ಕಾಗಿನೆಲೆ, ಚಿಕ್ಕಬಾಸೂರು, ಮತ್ತೂರು, ಮಲ್ಲೂರು, ಕೋಳೂರು, ದಿಡಗೂರ, ಸಂಗೂರು ಹಾಗೂ ಹಾವೇರಿಯ ದೇವಾಲಯಗಳಲ್ಲಿ ಕಾಣಬಹುದು.

ಕೋಳೂರಿನ ಕೊಡಗೂಸು ದೇವಾಲಯದ ನವರಂಗದಲ್ಲಿ ನಿಲ್ಲಿಸಲಾಗಿರುವ ವೀರಭದ್ರನ ಶಿಲ್ಪವು ಕ್ರಿ.ಶ.11ನೇ ಶತಮಾನಕ್ಕೆ ಸೇರಿದ್ದು, ನಾಲ್ಕು ಕೈಗಳಲ್ಲಿ ಖಡ್ಗ, ಗುರಾಣಿ, ಬಿಲ್ಲು ಬಾಣಗಳನ್ನು ಹಿಡಿದು, ವೀರಾವೇಷದಲ್ಲಿ ಪಾದಗಳನ್ನು ಅಗಲಿಸಿ ಚಲಿಸುವಂತೆ ಕಾಣುತ್ತದೆ. ಕಿರೀಟ, ಕೊರಳಹಾರ, ತೋಳಬಂದಿ ಮುಂತಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ದೊಡ್ಡದಾದ ಕಣ್ಣುಗಳು, ಕೊರಳಲ್ಲಿಯ ರುಂಡಮಾಲೆ ಜರಿದು ಕೆಳಭಾಗದಲ್ಲಿ ಬಂದಿದೆ. ಕಾಲಲ್ಲಿ ಕಡಗ, ಕೆಳಗಿನ ಬಲಬದಿಯಲ್ಲಿ ದಕ್ಷಬ್ರಹ್ಮನ ಶಿಲ್ಪವಿದೆ. ಶಿವಪುರದಲ್ಲಿನ ವೀರಭದ್ರಶಿಲ್ಪವು ವಿಶಿಷ್ಟವಾಗಿದೆ. ನಾಲ್ಕು ಕೈಗಳಲ್ಲಿ ಖಡ್ಗ, ಗುರಾಣಿ, ಬಿಲ್ಲು ಬಾಣಗಳನ್ನು ಹಿಡಿದು ವೀರಾವೇಷದಲ್ಲಿ ಕಾಲುಗಳನ್ನು ಅಗಲಿಸಿ ಆಕ್ರಮಿಸುವ ಭಂಗಿಯಲ್ಲಿರುವಂತೆ ಕಾಣುತ್ತದೆ. ಕಿರೀಟ, ಕೊರಳಹಾರ, ತೋಳಬಂದಿ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದೆ. ದೊಡ್ಡದಾದ ಕಣ್ಣುಗಳು, ಮೊಳಕಾಲಿನವರೆಗೂ ಇಳಿಬಿದ್ದಿರುವ ರುಂಡಮಾಲೆ ಧರಿಸಿ, ತಲೆಯ ಮೇಲ್ಭಾಗದಲ್ಲಿ ಐದು ಹೆಡೆಯ ಸರ್ಪವು ಹೆಡೆಬಿಚ್ಚಿದಂತೆ ಕೆತ್ತಲಾಗಿದೆ. ಪಾದಗಳಿಗೆ ಪಾದರಕ್ಷೆಗಳನ್ನು ಧರಿಸಿದ್ದು, ಶಿಲ್ಪದ ಕೆಳಭಾಗದ ಬಲಬದಿಯಲ್ಲಿ ದಕ್ಷಬ್ರಹ್ಮ ಹಾಗೂ ಎಡಬದಿಯಲ್ಲಿ ದಾಕ್ಷಾಯಣಿಯ ಉಬ್ಬುಶಿಲ್ಪಗಳನ್ನು ಕೊರೆಯಲಾಗಿದೆ.

**ಕಾರ್ತಿಕೇಯ:**

ಕುಮಾರ ತಂತ್ರದಲ್ಲಿ ಸ್ಕಂದನ ವಿವಿಧ ರೂಪಗಳಾದ ಶಕ್ತಿಂದ್ರ, ಸ್ಕಂದ, ಸೇನಾಪತಿ, ಸುಬ್ರಮಣ್ಯ, ಕಾರ್ತಿಕೇಯ, ಕುಮಾರ, ಷಣ್ಮುಖ, ತಾರಕಾರಿ, ಸೇನಾನಿ, ವಲ್ಲಿಕಲ್ಯಾಣ, ಸುಂದರಮೂರ್ತಿ, ಬಾಲಸ್ವಾಮಿ ಕ್ರೌಂಚಭೇದಕ ಹಾಗೂ ಶಿಖಿವಾಹನಗಳನ್ನು ಹೆಸರಿಸಲಾಗಿದೆ. ಕಾಶ್ಯಪ ಶಿಲ್ಪವು ಕಾರ್ತಿಕೇಯ ಅಥವಾ ಸ್ಕಂದ

ಶಿಲ್ಪದ ಮಾಹಿತಿಯನ್ನು ಒದಗಿಸುತ್ತದೆ. ಇವನು ಶಿಖಿವಾಹನ (ನವಿಲು) ಮತ್ತು ಕುಕ್ಕಟ ಧ್ವಜವನ್ನು ಹೊಂದಿರುವನು. ಶಿಲ್ಪವು ಎರಡು, ನಾಲ್ಕು, ಆರು, ಹನ್ನೆರಡು ಕೈಗಳಿಂದಲೂ ಮತ್ತು ಒಂದು ಮುಖದಿಂದ ಆರು ಮುಖಗಳಿಂದಲೂ ಕೂಡಿರಬಹುದು. ಕಾರ್ತಿಕೇಯ ಅಥವಾ ಸ್ಕಂದನು ಸ್ವರ್ಗದ ಸೇನಾಪತಿ, ಯುದ್ಧದೇವತೆ. ಇವನು ಉತ್ಸಾಹ ಮತ್ತು ತಾರುಣ್ಯದ ಸಂಕೇತ.

ಬಾಸವೂರು ಕಂಪಣದಲ್ಲಿ ಕಾರ್ತಿಕೇಯ ಶಿಲ್ಪಗಳು ಮತ್ತೂರು, ಕೆರವಡಿ, ಹಿರೇಹಳ್ಳಿ, ಕಲಕೇರಿ ಹಾಗೂ ಹಾವೇರಿಯಲ್ಲಿ ಎರಡು ಶಿಲ್ಪಗಳು ಸೇರಿದಂತೆ ಒಟ್ಟು ಆರು ಶಿಲ್ಪಗಳು ದೇವಾಲಯಗಳ ನವರಂಗಗಳಲ್ಲಿ ಕಂಡುಬಂದಿವೆ. ಹಾವೇರಿಯ ಕಲ್ಮೇಶ್ವರ ದೇವಾಲಯದ ನವರಂಗದಲ್ಲಿನ ಶಿಲ್ಪ ಆಕರ್ಷಕವಾಗಿದೆ. ನೀಲಿ ಛಾಯೆಯ ಕಪ್ಪು ಶಿಲೆಯಲ್ಲಿರುವ ಈ ಶಿಲ್ಪವು ಮೂರು ಮುಖಗಳು, ಆರು ಕೈಗಳನ್ನು ಹೊಂದಿದ್ದು ಅಂಕುಶ, ಪಾಶ, ಅಭಯ ಧರಿಸಿದೆ. ನವಿಲಿನ ಮೇಲೆ ಕುಳಿತ ಕಾರ್ತಿಕೇಯ ಕಿರೀಟ, ಕುಂಡಲ, ಭುಜಾಲಂಕಾರ ಹಾರಗಳು, ಉಪವೀತ, ಕಾಲಲ್ಲಿ ಗೆಜ್ಜೆಗಳಿಂದ ಅಲಂಕೃತಗೊಂಡಿದೆ. ಹಿರೇಬಾಸೂರಿನ ವ್ಯಾಸೇಶ್ವರ ದೇವಾಲಯದ ನವರಂಗದಲ್ಲಿರುವ ಕಾರ್ತಿಕೇಯನ ಶಿಲ್ಪವು ಆರುಮುಖಗಳು, ನಾಲ್ಕು ಕೈಗಳನ್ನು ಹೊಂದಿದ್ದು, ಅಂಕುಶ, ಪಾಶ, ಲಿಂಗ, ಅಭಯ ಧರಿಸಿದೆ. ನವಿಲಿನ ಮೇಲೆ ಕುಳಿತ ಕಾರ್ತಿಕೇಯ ಕಿರೀಟ, ಕುಂಡಲ, ಭುಜಾಲಂಕಾರ, ಹಾರಗಳು, ಉಪವೀತ, ಕಾಲ್ಗೆಜ್ಜೆಗಳಿಂದ ಅಲಂಕೃತಗೊಂಡಿದೆ.

**ಹರಿಹರ:**

ಶಿವ ಹಾಗೂ ವಿಷ್ಣು ಸೇರಿದ ಹರಿಹರ (ಶಂಕರನಾರಾಯಣ) ಶಿಲ್ಪಗಳ ಸೃಷ್ಟಿ ಧಾರ್ಮಿಕ ಸಮನ್ವಯದ ಪ್ರತೀಕ. ಹೀಗೆಯೆ ಶಿವ–ಪಾರ್ವತಿಯರು ಸೇರಿದ ಅರ್ಧನಾರೀಶ್ವರ, ಸೂರ್ಯ–ವಿಷ್ಣು ಸೇರಿದ ಸೂರ್ಯನಾರಾಯಣ, ಬುದ್ಧ–ಗಣಪತಿ ಸೇರಿದ ಬುದ್ಧಗಣಪತಿ ಇವೆಲ್ಲ ಇದೆ ಪ್ರವೃತ್ತಿಯ ಅಭಿವ್ಯಕ್ತಿಗಳು. ಪ್ರಸ್ತುತ ಅಧ್ಯಯನದ ಬಾಸವೂರು ಕಂಪಣದಲ್ಲಿ ಏಕೈಕ ಹರಿಹರ ಶಿಲ್ಪವು ಹಿರೇಬಾಸೂರಿನ ವ್ಯಾಸೇಶ್ವರ ದೇವಾಲಯದ ನವರಂಗದ ಕೋಷ್ಠದಲ್ಲಿ ಕಂಡುಬಂದಿದೆ. ಮೂರು ಅಡಿ ಎತ್ತರದ ಈ ಶಿಲ್ಪವು ಸ್ಥಾನಕ ಭಂಗಿಯಲ್ಲಿದ್ದು, ಕಿರೀಟ, ಕುಂಡಲ, ಕೊರಳಹಾರ, ಕಟಿಬಂಧ, ಎಡಬದಿಯಲ್ಲಿ ಯಜ್ಞೋಪವೀತ ಹಾಗೂ ಕಾಲ್ಕಡಗಗಳನ್ನು ಹೊಂದಿದೆ. ನಾಲ್ಕು ಕೈಗಳಿದ್ದು, ಹಿಂಬದಿಯ ಬಲಕೈಯಲ್ಲಿ ತ್ರಿಶೂಲವಿದ್ದರೆ, ಎಡಕೈಯಲ್ಲಿ ಚಕ್ರವಿದೆ. ಮುಂಭಾಗದ ಬಲ ಕೈ ಅಭಯಹಸ್ತ ಹೊಂದಿದ್ದರೆ, ಎಡ ಕೈ ತ್ರುಟಿತಗೊಂಡಿದೆ. ಮಕರತೋರಣ ಹೊಂದಿದ ಪ್ರಭಾವಳಿಯನ್ನು ಶಿಲ್ಪ ಹೊಂದಿದ್ದು, ತೋರಣದ ಕೆಳಭಾಗದ ಎರಡೂ ಬದಿಗಳಲ್ಲಿ ಚೌರಿ ಬೀಸುತ್ತಿರುವ ಸ್ತ್ರೀಶಿಲ್ಪಗಳಿವೆ. ಶೈಲಿಯ ದೃಷ್ಟಿಯಿಂದ ಶಿಲ್ಪವು 11ನೇ ಶತಮಾನಕ್ಕೆ ಸೇರಿದೆ.

**ಉಮಾ ಮಹೇಶ್ವರ:**

ಉಮಾಮಹೇಶ್ವರ ರೂಪವು ಶಿವನ ಇತರ ರೂಪಗಳಲ್ಲಿ ಒಂದಾಗಿದೆ. ಇಲ್ಲಿ ಶಿವನು ಉಮೆಯೊಂದಿಗೆ ಗುರುತಿಸಿಕೊಳ್ಳುತ್ತಾನೆ. ಬಾಸವೂರು ಕಂಪಣದಲ್ಲಿ ಸುಂದರವಾದ ಉಮಾಮಹೇಶ್ವರ ಶಿಲ್ಪಗಳು ಉಪ್ಪುಣಸಿ, ಕಳ್ಳಿಹಾಳ, ಕೋಳೂರು, ಕುಳೇನೂರು, ಕೆಲವರಕೊಪ್ಪ ಸೇರಿದಂತೆ ಇನ್ನೂ ಹಲವು ದೇವಾಲಯಗಳಲ್ಲಿ ಕಂಡುಬಂದಿವೆ. ಉಪ್ಪುಣಸಿಯ ಕಲ್ಮೇಶ್ವರ ನವರಂಗದಲ್ಲಿರುವ ಶಿಲ್ಪವು ನೀಲಿ ಛಾಯೆಯ ಕಪ್ಪು ಕಲ್ಲಿನಲ್ಲಿ ನಿರ್ಮಿಸಲ್ಪಟ್ಟಿದ್ದು, ಶಿವನು ಸಮಭಂಗಿಯಲ್ಲಿ ನಿಂತಿದ್ದರೆ, ಉಮೆಯು ವಾಲಿದಂತೆ ನಿಂತಿರುವಳು. ಚತುರ್ಭುಜನಾದ ಶಿವನು ತ್ರಿಶೂಲ, ಡಮರು, ಅಭಯಹಸ್ತ ಮತ್ತೊಂದು ಕೈಯನ್ನು ಉಮೆಯ ಮೇಲಿರಿಸಿದ್ದಾನೆ. ಕಿರೀಟ, ಹಾರಗಳು, ಉದರಬಂಧ, ವಸ್ತ್ರಾಭರಣಗಳಿಂದ ಶೋಭಿತನಾಗಿರುವನು. ದ್ವಿಭುಜೆಯಾದ ಉಮೆಯು ಒಂದು ಕೈಯಲ್ಲಿ ಪುಷ್ಪ ಮತ್ತೊಂದು ಕೈಯಿಂದ ಶಿವನ ಬೆನ್ನನ್ನು ಹಿಡಿದಿರುವಳು. ಉಮೆಯು ಕೊರಳಹಾರ, ಕುಂಡಲಗಳು ಹಾಗೂ ವಸ್ತ್ರಾಭರಣಗಳಿಂದ ಅಲಂಕೃತಳಾಗಿದ್ದಾಳೆ. ಅವಳ ಒಂದು ಪಾದವು ಪೀಠ ಹೊತ್ತ ಸಿಂಹದ ತಲೆಯ ಮೇಲಿದೆ. ಮಕರ ತೋರಣದಲ್ಲಿ ಗಣಪತಿ ಹಾಗೂ ಷಣ್ಮುಖರ ಉಬ್ಬುಶಿಲ್ಪಗಳನ್ನು ಕಾಣಬಹುದು.

ಕೋಳೂರಿನ ಕೊಡಗೂಸು ದೇವಾಲಯದಲ್ಲಿನ ಉಮಾಮಹೇಶ್ವರ (ಕ್ರಿ.ಶ. 11ನೇ ಶತಮಾನ) ಶಿಲ್ಪದಲ್ಲಿ ಶಿವ ಹಾಗೂ ಉಮೆಯರು ತ್ರಿಭಂಗಿಯಲ್ಲಿ ನಿಂತಿರುವರು. ಚತುರ್ಭುಜನಾದ ಶಿವನು ತ್ರಿಶೂಲ, ಡಮರು, ಅಭಯಹಸ್ತ ಮತ್ತೊಂದು ಕೈಯನ್ನು ಉಮೆಯ ಮೇಲಿರಿಸಿದ್ದಾನೆ. ಕಿರೀಟ, ಹಾರಗಳು, ಉದರಬಂಧ, ವಸ್ತ್ರಾಭರಣಗಳಿಂದ ಶೋಭಿತನಾಗಿರುವನು. ದ್ವಿಭುಜೆಯಾದ ಉಮೆಯು ಒಂದು ಕೈಯಲ್ಲಿ ಪುಷ್ಪ ಮತ್ತೊಂದು ಕೈಯಿಂದ ಶಿವನ ಬೆನ್ನನ್ನು ಹಿಡಿದಿರುವಳು. ಉಮೆಯು ಕೊರಳಹಾರ, ಕುಂಡಲಗಳು ಹಾಗೂ ವಸ್ತ್ರಾಭರಣಗಳಿಂದ ಅಲಂಕೃತಳಾಗಿದ್ದಾಳೆ. ಮಕರತೋರಣದ ಕೆಳಭಾಗದಲ್ಲಿ ಗಣಪತಿ ಹಾಗೂ ಷಣ್ಮುಖರ ಉಬ್ಬುಶಿಲ್ಪಗಳನ್ನು ಕಾಣಬಹುದು. ಶಿವನ ಎಡಪಾದದ ಕೆಳಗೆ ನಂದಿ ಹಾಗೂ ಉಮೆಯ ಎಡಪಾದದ ಕೆಳಗೆ ಸಿಂಹವನ್ನು ಕಂಡರಿಸಲಾಗಿದೆ.

ಆಸೀನ ಉಮಾಮಹೇಶ್ವರ ಶಿಲ್ಪವು ಕೆಲವರಕೊಪ್ಪದ ಈಶ್ವರ ದೇವಾಲಯದ ನವರಂಗದಲ್ಲಿದೆ. ಎರಡೂವರೆ ಅಡಿಗಳಷ್ಟು ಎತ್ತರವಾಗಿರುವ ಶಿಲ್ಪದಲ್ಲಿ ಶಿವನು ಸೌಖ್ಯಲಲಿತಾಸನದಲ್ಲಿ ಕುಳಿತಿರುವನು. ನಾಲ್ಕು ಕೈಗಳನ್ನು ಹೊಂದಿದ್ದು ಹಿಂಬದಿಯ ಎರಡು ಕೈಗಳಲ್ಲಿ ತ್ರಿಶೂಲ ಹಾಗೂ ಡಮರುಗಳನ್ನು ಹೊಂದಿದ್ದರೆ, ಮುಂಭಾಗದ ಬಲದ ಕೈ ತ್ರುಟಿತವಾಗಿದೆ. ಎಡಕೈಯಲ್ಲಿ ಉಮೆಯ ಸೊಂಟವನ್ನು ಬಳಸಿದಂತಿದೆ. ಉಮೆಯು ಶಿವನ ಎಡತೊಡೆಯ ಮೇಲೆ ಕುಳಿತಿರುವಳು. ಇವಳು ದ್ವಿಭುಜಳಾಗಿದ್ದು, ಒಂದು ಕೈ ಶಿವನ ಬೆನ್ನನ್ನು ಬಳಸಿದ್ದರೆ, ಎಡಕೈಯಲ್ಲಿ ಲಿಂಗವನ್ನು ಹಿಡಿದಿರುವಳು.

ಕೆಳಭಾಗದಲ್ಲಿ ನಂದಿಯ ಶಿಲ್ಪವನ್ನು ಕೆತ್ತಲಾಗಿದೆ.

**ರತಿ ಮನ್ಮಥ:**

ಮನ್ಮಥ ರೂಪದಲ್ಲಿ ಸುಂದರನಾದ ದೇವನಾಗಿದ್ದಾನೆ. ಈತನು ಯೌವನ ಹಾಗೂ ಪ್ರೀತಿಯ ಸಂಕೇತವಾಗಿರುವನು. ವಿಷ್ಣುರತ್ನ, ಧರ್ಮೋತ್ತರ ಪುರಾಣಗಳು ಮನ್ಮಥನ ಶಿಲ್ಪದ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಕಾಮದೇವನನ್ನು ದ್ವಿಬಾಹುಗಳಿಂದಲೂ, ಅಷ್ಟಬಾಹುಗಳಿಂದಲೂ ಗುರುತಿಸಲಾಗುತ್ತದೆ. ದ್ವಿಬಾಹು ಇದ್ದಲ್ಲಿ ಕಬ್ಬಿನ ಬಿಲ್ಲನ್ನು ಮತ್ತು ಬಾಣವನ್ನು ಹಿಡಿದಿರುವನು. ಇವನ ಪತ್ನಿಯಾದ ಪ್ರೀತಿ ಮತ್ತು ರತಿ ಕ್ರಮವಾಗಿ ತೃಪ್ತಿ ಮತ್ತು ಆನಂದದ ಸಂಕೇತ. ಬಾಸವೂರು ಕಂಪಣದ ದೇವಾಲಯಗಳಲ್ಲಿ ಕಂಡುಬರುವ ಏಕೈಕ ರತಿ–ಮನ್ಮಥ ಶಿಲ್ಪವನ್ನು ಕುಳೇನೂರಿನ ಕಲ್ಮೇಶ್ವರ ದೇವಾಲಯದ ನವರಂಗದ ಭಿತ್ತಿಯಲ್ಲಿ ಕಾಣಬಹುದು. ಕ್ರಿ.ಶ.11ನೇ ಶತಮಾನದ ಚಾಲುಕ್ಯ ಶೈಲಿಯಲ್ಲಿರುವ, ನೀಲಿಛಾಯೆಯ ಕಪ್ಪು ಶಿಲೆಯಲ್ಲಿ ನಿರ್ಮಾಣಗೊಂಡಿರುವ ಶಿಲ್ಪವು ಮೂರು ಅಡಿಗಳಷ್ಟು ಎತ್ತರವಾಗಿದ್ದು, ತ್ರಿಭಂಗಿಯಲ್ಲಿದೆ. ಮನ್ಮಥನು ಎಡಗೈಯಲ್ಲಿ ಕಬ್ಬಿನ ಜಲ್ಲೆಯ ಬಿಲ್ಲನ್ನು ಹಿಡಿದಿದ್ದು, ಬಲಗೈಯಲ್ಲಿ ಪಂಚಬಾಣಗಳನ್ನು ಹಿಡಿದಿದ್ದಾನೆ. ಕಿರೀಟ, ಕುಂಡಲ, ಕೊರಳಹಾರಗಳು, ಕೇಶ, ಉದರಬಂಧ, ಯಜ್ಞೋಪವೀತ, ಕಂಕಣ, ಕಟಿಸೂತ್ರ, ವಸ್ತ್ರಗಳಿಂದ ಅಲಂಕೃತನಾಗಿದ್ದಾನೆ. ಆತನ ಪಕ್ಕದಲ್ಲಿ ನಿಂತಿರುವ ರತಿ ಸುಂದರ ಕೇಶವಿನ್ಯಾಸ ಹೊಂದಿದ್ದು, ಕಂಠಹಾರಗಳು, ತೋಳುಬಂಧಿಗಳು, ಕಂಕಣ, ಕಟಿಸೂತ್ರ ಮತ್ತು ವಸ್ತ್ರಗಳಿಂದ ಅಲಂಕೃತಳಾಗಿದ್ದಾಳೆ. ಬಲಗೈಯನ್ನು ಕಟಿಅವಲಂಬಿತಳಾಗಿ ಎಡಗೈಯಲ್ಲಿ ಪುಷ್ಪವನ್ನು ಹಿಡಿದು ವೈಯಾರದಿಂದ ನಿಂತಿರುವಳು.

**ನಂದಿ:**

ಶಿವನ ಪರಿವಾರದಲ್ಲಿ ಬರುವ ದೇವತೆಗಳಲ್ಲಿ ನಂದಿ ಪ್ರಮುಖನಾಗಿದ್ದಾನೆ. ನಂದಿಯು ಶಿವನ ವಾಹನ. ನಂದೀಶ ಅಥವಾ ನಂದಿಕೇಶ್ವರನನ್ನು ಮಾನವ ರೂಪದಲ್ಲಿ ಮೂರು ಕಣ್ಣುಗಳನ್ನು, ನಾಲ್ಕು ಕೈಗಳನ್ನು ಹೊಂದಿದ್ದು, ಹುಲಿ ಚರ್ಮವನ್ನು ಧರಿಸಿದವನೆಂದು ಹೇಳಲಾಗಿದೆ. ಶಿವನನ್ನು ವೃಷಧ್ವಜ, ವೃಷಕೇತನ ಎಂದೂ ಕರೆಯಲಾಗಿದೆ. ಸಿಂಧೂ ಸಂಸ್ಕೃತಿಯಲ್ಲಿಯೂ ವೃಷಭಕ್ಕೆ ಪ್ರಾಮುಖ್ಯತೆ ಇದ್ದುದನ್ನು ಕಾಣುತ್ತೇವೆ. ವೃಷಭದ ಬೆನ್ನ ಮೇಲಿನ ಡುಬ್ಬ (ಇಣಿ) ಲಿಂಗವನ್ನು ಹೋಲುತ್ತದೆ. ಆದ್ದರಿಂದ ನಂದಿಯು ಶಿವನನ್ನು ಹೊತ್ತವನು ಎಂದು ತಿಳಿಯಲಾಗುತ್ತದೆ. ಕೃಷಿಕಾರ್ಯದಲ್ಲಿಯೂ ವೃಷಭನು ಬಹುರೀತಿಯಲ್ಲಿ ಉಪಯೋಗವಾಗುತ್ತಿದ್ದು, ಈ ಹಿನ್ನಲೆಯಲ್ಲಿಯೇ ಕೆಲವು ದೇವಾಲಯಗಳಲ್ಲಿ ಶಿವನಿಗಿಂತಲೂ ಅಗ್ರಪೂಜೆ ನಂದೀಶನಿಗೆ ಸಲ್ಲುವುದನ್ನು ಕಾಣಬಹುದು.

ಬಾಸವೂರು ಕಂಪಣದಲ್ಲಿ ಹೆಚ್ಚಿನ ಸಂಖ್ಯೆಯ ದೇವಾಲಯಗಳು ಶೈವ ದೇವಾಲಯಗಳೇ ಆಗಿರುವುದರಿಂದ ನಂದಿಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ಕಲಕೇರಿಯಲ್ಲಿನ ಬಸವೇಶ್ವರ ದೇವಾಲಯದ ನಂದಿಶಿಲ್ಪವು ಆಕರ್ಷಕವಾಗಿದೆ. ನೀಲಿಮಿಶ್ರಿತ ಕಪ್ಪುಶಿಲೆಯಲ್ಲಿ ಅತ್ಯಂತ ನುಣುಪಾಗಿ ನಿರ್ಮಿಸಲಾಗಿರುವ ನಂದಿಶಿಲ್ಪವು ನಾಲ್ಕು ಅಡಿ ಎತ್ತರ ಹಾಗೂ ಒಂದು ಮೀಟರ್ ಉದ್ದವಾಗಿದೆ. ಹಣೆಪಟ್ಟಿ, ಮಧ್ಯದಲ್ಲಿ ಪದಕ, ಕೊರಳಪಟ್ಟಿ, ಬೆನ್ನುಬಳಸಿದ ಪದಕಹಾರ, ಗಂಟೆ, ಗೆಜ್ಜೆಗಳಿಂದ ಅಲಂಕೃತಗೊಂಡಿದೆ. ಇದೇ ರೀತಿಯಾಗಿ ಕೋಳೂರಿನ ಕೊಡಗೂಸು ದೇವಾಲಯದಲ್ಲಿನ ನಂದಿಶಿಲ್ಪವೂ ನಾಲ್ಕುಕಾಲು ಅಡಿಗಳಷ್ಟು ಎತ್ತರವಾಗಿದ್ದು, ಒಂದು ಮೀಟರ್ ಉದ್ದವಾಗಿದೆ. ಇದೂ ಕೂಡಾ ನೀಲಿಮಿಶ್ರಿತ ಕಪ್ಪುಶಿಲೆಯಲ್ಲಿ ನುಣುಪಾಗಿ ನಿರ್ಮಿಸಲ್ಪಟ್ಟಿದೆ. ಈ ನಂದಿಶಿಲ್ಪವು ಅಲಂಕೃತವಾಗಿದ್ದು, ಹಣೆಪಟ್ಟಿ, ಮಧ್ಯದಲ್ಲಿ ಪದಕ, ಕೊರಳಪಟ್ಟಿ, ಡುಬ್ಬಬಳಸಿದ ಪದಕಹಾರ, ಗಂಟೆ, ಗೆಜ್ಜೆಗಳನ್ನು ಹೊಂದಿದೆ. ಇದೇ ಅವಧಿಗೆ ಸೇರಿರಬಹುದಾದ ದೇವಗಿರಿಯ ಬಸವಣ್ಣ ದೇವಾಲಯದಲ್ಲಿನ ನಂದಿಶಿಲ್ಪವು ಐದು ಅಡಿಗಳಿಗಿಂತಲೂ ಹೆಚ್ಚು ಎತ್ತರವಾಗಿದ್ದು, ಅತ್ಯಂತ ಆಕರ್ಷಕವಾಗಿದೆ. ಸರ್ವಾಲಂಕೃತವಾದ ಈ ನಂದಿಶಿಲ್ಪಕ್ಕೆ ಮರಾಠಾ ಪೇಶ್ವೆಗಳು ಬೆಳ್ಳಿಯ ಆಭರಣಗಳನ್ನು ದೇಣಿಗೆ ಕೊಟ್ಟಿರುವರು.

ಬಾಸವೂರು ಕಂಪಣದ ಪರಿಸರದಲ್ಲಿ ದೊರೆಕಿರುವ ಮೂರ್ತಿಶಿಲ್ಪಗಳನ್ನು ಅವಲೋಕಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಶೈವಶಿಲ್ಪಗಳು ದೊರಕಿರುವುದು ಈ ಕಂಪಣದಲ್ಲಿ ಶೈವಧರ್ಮವು ಪ್ರಬಲ ಧರ್ಮವಾಗಿ ಆಚರಣೆಯಲ್ಲಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ಪಂಥಕ್ಕೆ ಸಂಬಂಧಿಸಿದ ಶಿವನ ಪರಿವಾರಕ್ಕೆ ಸೇರಿದ ಶಿವಲಿಂಗಗಳು, ಗಣಪತಿ, ಭೈರವ, ವೀರಭದ್ರ, ಕಾರ್ತಿಕೇಯ, ಹರಿಹರ, ಉಮಾಮಹೇಶ್ವರ, ಹಾಗೂ ನಂದಿಶಿಲ್ಪಗಳ ಶಿಲ್ಪಗಳು ಆಕರ್ಷಕವೂ ಮನೋಜ್ಞವಾಗಿವೆ. ಈ ಕಂಪಣದ ಕುಳೇನೂರಿನಲ್ಲಿ ದೊರೆತಿರುವ ಏಕೈಕ ರತಿಮನ್ಮಥ ಶಿಲ್ಪವು ವಿಶಿಷ್ಟವಾಗಿದೆ.

## ಪರಾಮರ್ಶನ ಗ್ರಂಥಗಳು:


1. ಕಾರಂತ ಶಿವರಾಮ, (1975), ಚಿತ್ರಶಿಲ್ಪ ಮತ್ತು ವಾಸ್ತುಕಲೆಗಳು, ಪ್ರಸಾರಾಂಗ, ಕ.ವಿ.ವಿ. ಧಾರವಾಡ.
2. ಕುಲಕರ್ಣಿ ಡಿ.ಜಿ., (2007–08), ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಕರ್ನಾಟಕ ಸಂಶೋಧನಾ ಮಂಡಳ, ಧಾರವಾಡ.
3. ರಾಜಶೇಖರ ಎಸ್., (1988), ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತಾ ಪಬ್ಲಿಕೇಶನ್, ಧಾರವಾಡ.
4. ರಾಮಚಂದ್ರರಾವ್ ಎಸ್.ಕೆ., (1975), ಮೂರ್ತಿಶಿಲ್ಪ ನೆಲೆ ಹಿನ್ನಲೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
5. ರಾಮಚಂದ್ರರಾವ್ ಎಸ್.ಕೆ., (1980), ಭಾರತದ ದೇವಾಲಯಗಳ ನೆಲೆ ಹಿನ್ನಲೆ, ಸ್ವತಂತ್ರ ಪ್ರಕಟಣೆ, ಬೆಂಗಳೂರು.


**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.